# ಪಾಠ-11: ಪಾರುಪತ್ಯೆಗಾರಿಕೆ
## (ಮತ್ತಾಯ 25)

**ಮೂಲ: ಬ್ರೂಸ್ ಎನ್. ಕ್ಯಾಮರಾನ್, ಅನುವಾದ: ಪಾಸ್ಟರ್ ಚೆಲುವರಾಜು**

**ಪೀಠಿಕೆ:** ಸಬ್ಬತ್ ಶಾಲೆಯ ಪಾಠಗಳು ಹಿಂದುಮುಂದು ಆದಂತಿದೆ ಅಲ್ಲವೇ? ನಾವು ವಾರದಲ್ಲೊಂದು ವಿಶ್ರಾಂತಿ ದಿನ ನಿತ್ಯಕಾಲಕ್ಕೂ ರಜೆಯ ದಿನ ಅನುಭವಿಸಬಹುದಾದ ಪರಲೋಕವನ್ನು ಕುರಿತು ಕಲಿತೆವು. ಕಳೆದವಾರ ನಾವು ಮಾಡಬೇಕಾದ ಕೆಲಸವಾದ ''ಶಿಷ್ಯತ್ವ''ವನ್ನು ಕುರಿತು ಅರಿತೆವು. ಈಗ (ಭಯಾನಕ): ''ಪಾರುಪತ್ಯೆಗಾರಿಕೆ!'' ತ್ರೈಮಾಸಿಕದ ಅಂತ್ಯ ರೋಮಾಂಚನಕಾರಿಯಾಗಿರಬೇಕಲ್ಲವೇ? ಅಥವಾ ಪಾರುಪತ್ಯಗಾರಿಕೆಯೇ ರೋಮಾಂಚನಕಾರಿಯೇ? ಯಾವಾಗಲಾದರೂ ಮಿಶನ್ ಅಧಿಕಾರಿಗಳು ನನ್ನ ಚರ್ಚಿಗೆ ಭೇಟಿಕೊಟ್ಟರೆ, ಅವರು ಪಾರುಪತ್ಯೆಗಾರಿಕೆಯನ್ನು ಕುರಿತು ಮಾತನಾಡುವಾಗ, ಹೇಳುವುದೇನು? ಮಿಶನ್ ಕೆಲಸಕ್ಕೆ ಇನ್ನೂ ಹೆಚ್ಚಿನ ಹಣ ಬೇಕಾಗಿದೆ. ಅಂಥಲೋ, ಇಲ್ಲವೇ ನೀವು ಇನ್ನೂ ಕಷ್ಟಪಟ್ಟು ಹೆಚ್ಚು ಕೆಲಸಮಾಡಬೇಕೆಂತಲೂ, ನನ್ನನ್ನು ಕುರಿತು ಹೇಳಿದ್ದುಂಟು. ಆದರೆ ನನಗನ್ನಿಸುತ್ತದೆ, ಸತ್ಯವೇದದಲ್ಲಿ ಈ ವಿಷಯವನ್ನು ಕುರಿತು ಇನ್ನೂ ಹೆಚ್ಚಿನ ಧನಾತ್ಮಕ ವಿಷಯಗಳುಂಟು. ಸತ್ಯವೇದವನ್ನು ಆಳವಾಗಿ ಅಧ್ಯಯನ ಮಾಡಿ, ಪಾರುಪತ್ಯೆಗಾರಿಕೆ ವಿಷಯವಾಗಿ ಹೆಚ್ಚಾಗಿ ಅರಿಯಲು ಪ್ರಯತ್ನ ಮಾಡೋಣ.

I. **ಯಶಸ್ಸಿನ ಜೀವನ:**

ಅ) ಮತ್ತಾಯ 25:14-15 ನ್ನು ಓದಿಕೊಳ್ಳಿರಿ. ಒಬ್ಬ ಸೇವಕನಿಗಿಂತ ಮತ್ತೊಬ್ಬ ಸೇವಕನಿಗೆ ಯಜಮಾನ ಹೆಚ್ಚಿನ ಹಣ ಕೊಡಲು ಕಾರಣವೇನು? ಯಜಮಾನ ತಾರತಮ್ಯ ತೋರಿಸುತ್ತಿದ್ದಾನೆಯೇ? (ಇಲ್ಲ, ಸೇವಕರಲ್ಲಿ ಇದ್ದ ನೈಸರ್ಗಿಕ ಸಾಮರ್ಥ್ಯತನದಲ್ಲಿ ಭಿನ್ನತೆಯಿತ್ತು. ಯಾರಿಗೆ ಹೆಚ್ಚಿನ ಸಾಮರ್ಥ್ಯವಿತ್ತೋ ಅವರಿಗೆ ಹೆಚ್ಚಿನ ಹಣ ಕೊಡಲ್ಪಟ್ಟಿತು).

1) ಇದು ಅನ್ಯಾಯವೇ? ಎಲ್ಲರಿಗೂ ಹಣವನ್ನು ಸಮವಾಗಿ ಹಂಚಿಕೊಡಬಹುದಿತ್ತಲ್ಲವೇ?

i) ಅಥವಾ ಹೆಚ್ಚು ಹಣ ತೆಗೆದುಕೊಂಡುವವನ ಮೇಲೆ ಹೆಚ್ಚಿನ ಜವಾಬ್ದಾರಿ ಬೀಳುವುದರಿಂದ ಅದು ಒಂದು ರೀತಿಯಲ್ಲಿ ಅನ್ಯಾಯ ಅನಿಸುತ್ತದಲ್ಲವೇ?

ಆ) ಮತ್ತಾಯ 25:16-18 ನ್ನು ಓದಿಕೊಳ್ಳಿ. "ಒಂದು ತಲಾಂತು" ಪಡೆದವನ ಕುರಿತ ಚರ್ಚೆ ಏನು? ಇಂದು ಸ್ಟಾಕ್ ಮಾರ್ಕೆಟ್ ಯಾವ ಸ್ಥಿತಿಗೆ ಬಂದಿದೆ? ಅಮೇರಿಕಾದ ಬ್ಯಾಂಕುಗಳ ಪಾಡೇನು? ಇದೆಲ್ಲ ನೋಡಿದರೆ, ಭೂಮಿಯಲ್ಲಿ ತೋಡಿದ "ಕುಳಿ" ಹಣ ಇಡಲು ಕ್ಷೇಮಕರವಾದ ಸ್ಥಳ ಎನಿಸುತ್ತಿಲ್ಲವೇ? ಊಳಟ್ಟ ಠೇವಣಿಗೆ ಮೋಸವಿಲ್ಲ.

1) ಒಂದು ತಲಾಂತು ಪಡೆದವ, ವ್ಯಾಪಾರದಲ್ಲಿ ಅದನ್ನು ಹೂಡಲು, ಸಾಕಷ್ಟು ನಂಬಿಕೆ ಬೆಳೆಯಿಸಿಕೊಂಡಿರಲಿಲ್ಲವೇ (ಹೌದು, ಆ ಒಂದು ತಲಾಂತನ್ನು ವ್ಯಾಪಾರದಲ್ಲಿ ನಾಶಮಾಡಿಕೊಂಡು, ಯಜಮಾನ ಬಂದು ಲೆಕ್ಕ ಕೇಳಿದಾಗ, ನಷ್ಟದ ವರದಿ ಕೊಟ್ಟು ಉಗಿಸಿಕೊಳ್ಳುವುದಕ್ಕಿಂತ, ಕೊಟ್ಟ ಹಣವನ್ನು ಹಾಗೇ ತಿರುಗಿಸಿಕೊಡುವುದು ಒಳ್ಳೆಯ ಕೆಲಸ ಎಂದುಕೊಂಡಿರಬೇಕು ಅವನು.

ಇ) ಮತ್ತಾಯ 25:19-23 ನ್ನು ಓದಿಕೊಳ್ಳಿ. ಎರಡು ತಲಾಂತಿಗೆ, ಎರಡು ತಲಾಂತು ಕೂಡಿಸಿದವನಿಗೂ, ಐದು ತಲಾಂತಿಗೆ, ಮತ್ತೈದು ತಲಾಂತು ಕೂಡಿಸಿದವನಿಗೂ ಒಂದೇ ರೀತಿಯಾದ ಬಹುಮಾನ ಕೊಡುವುದು ಸರಿಯೇ? ಇದೂ ಸಹ ಅನ್ಯಾಯವಲ್ಲವೇ? (ಇಬ್ಬರೂ ತಮಗೇನೂ ಕೊಡಲ್ಪಟ್ಟಿತ್ತೋ ಅದನ್ನು ದ್ವಿಗುಣಿಸಿದರು. ಯಜಮಾನನು ಅವರ ಸಾಮರ್ಥ್ಯಕ್ಕನುಸಾರವಾಗಿ ಸಂಪತ್ತನ್ನು ಹಂಚಿಕೊಟ್ಟ ಮೇಲೆ, ಅವರಲ್ಲಿರುವ ನೈಸರ್ಗಿಕ ಪ್ರತಿಭೆಯ ಕೊರತೆಯ ಸಲುವಾಗಿ ಅವರಿಗೆ ದಂಡಹಾಕಲ್ಪಡುವುದಿಲ್ಲ. ಹುಟ್ಟಿದಾಗ ನಿನಗೇನು ಪ್ರತಿಭೆಗಳಿತ್ತೋ ಅದನ್ನು ಕುರಿತು ಪ್ರಶ್ನಿಸುವುದಲ್ಲ, ಆದರೆ ಆ ಪ್ರತಿಭೆಯನ್ನು ಬಳಸಿಕೊಂಡು ನೀನೇನು ಸಾಧಿಸಿದೆ ಎಂಬುದೇ ಇಲ್ಲಿನ ಮುಖ್ಯ ಪ್ರಶ್ನೆ).

ಈ) ಮತ್ತಾಯ 25:24 ನ್ನು ಓದಿಕೊಳ್ಳಿರಿ. ಒಂದು ತಲಾಂತು ಪಡೆದವನ ಮನೋನೆಲೆ ಏನಾಗಿತ್ತು ಎಂಬುದನ್ನು ಇದು ತೋರಿಸುತ್ತದೆ. ಆತ, ತನ್ನ ಯಜಮಾನನನ್ನು "ಸ್ವಾಮಿ" ಎಂದು ಕರೆದದ್ದು ಏಕೆ?

1) ಒಬ್ಬನ ಕಷ್ಟದುಡಿತದ ಗಳಿಕೆಯನ್ನು ಇನ್ನೊಬ್ಬ ಸುಲುಕೊಳ್ಳುವದು ಸರಿಯೇ? ಇದನ್ನೇ ಅಲ್ಲವೇ ಆಂಗ್ಲದಲ್ಲಿ "ಎಕ್ಷ್ಪ್ಲಾಯೇಟೇಷನ್" ಎನ್ನುವದು?

ಉ) ಮತ್ತಾಯ 25:25 ನ್ನು ಓದಿಕೊಳ್ಳಿ. ಒಂದು ತಲಾಂತು ಪಡೆದ ವ್ಯಕ್ತಿ ತನ್ನ ಕಥೆಯನ್ನು ಬದಲಾಯಿಸಿದನೇ? (ಹೌದು! ಈಗ ಆತ ಹೇಳುತ್ತಿದ್ದಾನೆ ''ನಾನು ಹೆದರಿದೆ'' ಎಂಬುದಾಗಿ ಮೊದಲನೆಯದಾಗಿ ಆತ ತನ್ನ ಯಜಮಾನ ಬಂಡವಾಳಗಾರ ಎಂದುಕೊಂಡಿದ್ದೆ ಎನ್ನುತ್ತಾರೆ, ನಂತರದಲ್ಲಿ, ಹೆದರಿಕೆಯ ಪ್ರಸ್ತಾಪಮಾಡುತ್ತಿದ್ದಾನೆ).

ಊ) ಮತ್ತಾಯ 25:26-27 ನ್ನು ಓದಿಕೊಳ್ಳಿರಿ. ಯಜಮಾನನು ಈ ಸಮಸ್ಯೆಯನ್ನು ಯಾವ ರೀತಿಯಾಗಿ ವಿಶ್ಲೇಷಿಸುತ್ತಾನೆ? ಒಂದು ತಲಾಂತಿನ ಮನುಷ್ಯ ಹೆದರಿದ್ದಾನೆಯೇ? ಬಂಡವಾಳಶಾಹಿಗಳ ಮೇಲೆ ನ್ಯಾಯಬದ್ಧವಾದ ದೂರು ಇವನಲ್ಲಿದೆಯೇ? (ಯಜಮಾನನು ಇವನನ್ನು ''ಮೈಗಳ್ಳನಾದ ಕೆಟ್ಟ ಆಳು ನೀನು'' ಎಂದು ಕರೆದಿದ್ದಾನೆ).

1) ಅವನನ್ನು ''ಕೆಟ್ಟ'' ಆಳು ಎಂದು ಯಜಮಾನ ಹೇಳಿದ್ದು ಸರಿಯೇ? ಆ ಒಂದು ತಲಾಂತಿನ ಮನುಷ್ಯ ನೈತಿಕ ಹಕ್ಕು ಸಾಧಿಸುತ್ತಿದ್ದಾನೆ ಎಂದು ನನಗನ್ನಿಸುತ್ತಿತ್ತು. (ದೇವರ ದೃಷ್ಟಿಯಲ್ಲಿ ಬಂಡವಾಳಶಾಹಿತನದ ಆಲೋಚನೆಯೇ ದುರುಳತನ! ಯಜಮಾನನ ವ್ಯವಹಾರ ಕುದುರಬೇಕು ಎಂಬ ಆಲೋಚನೆ ಆಳಿನಲ್ಲಿ ಇಲ್ಲದೇ ಹೋದಾಗ ಆತ ''ಕೆಟ್ಟವನು'' ಅನ್ನಿಸಿಕೊಳ್ಳುತ್ತಾನೆ ಎಂಬುದರಲ್ಲಿ ಸಂದೇಹವೇ ಇಲ್ಲ. ಅಲ್ಲದೇ ಆ ಆಳು ಯಜಮಾನನ ಅನುಪಸ್ಥಿತಿಯಲ್ಲಿ ನಿಷ್ಕ್ರಿಯನಾಗಿದ್ದರಿಂದ ಆತ ''ಸೋಮಾರಿಯೇ ಸರಿ''.

ಋ) ಮತ್ತಾಯ 25:28-30 ನ್ನು ಓದಿಕೊಳ್ಳಿರಿ. ಒಂದು ತಲಾಂತಿನವನ ಹತ್ತಿರ ಇರುವ ಅಲ್ಪ ಹಣವನ್ನು ತೆಗೆದು ಹತ್ತು ತಲಾಂತು ಇರುವವನಿಗೆ ಕೊಟ್ಟದ್ದು ಏಕೆ? ಈಗ ಹತ್ತು ತಲಾಂತು ಇರುವವನ ಹತ್ತಿರ ಬೇಕಾದಷ್ಟು ಹಣವಿದ್ದರೆ, ಒಂದು ತಲಾಂತು ಇರುವವನ ಹತ್ತಿರ ಹಣವೇ ಇಲ್ಲ. ಇದು ನ್ಯಾಯವೇ? (ಈ ವೈಚಿತ್ರದ ಚರ್ಚೆಯನ್ನು ಮುಂದಿನ ಭಾಗದಲ್ಲಿ, ಮತ್ತಾಯ 25:34-40 ನ್ನು ವಿಶ್ಲೇಷಿಸುವಾಗ ಮುಂದುವರಿಸೋಣ).

ಋ) ಒಂದು ನಿಮಿಷ ಹಿಂದೆ ಹೋಗಿ, ಈ ಕಥೆಯನ್ನು ಕುರಿತು ಚಿಂತನೆ ಮಾಡೋಣ. ಯೇಸುಸ್ವಾಮಿ ಇಲ್ಲಿ ನಮಗೇನು ಕಲಿಸುತ್ತಿದ್ದಾರೆ? ಹಣ, ತಲಾಂತು ಮತ್ತು ಕಾಲವನ್ನು ಕುರಿತು ಬೋಧನೆ ಮಾಡುತ್ತಿದ್ದಾರೆಯೇ? (ಇದೊಂದು ''ದೇವರ

ರಾಜ್ಯ''ವನ್ನು ಕುರಿತ ಸ್ವಾಮ್ಯ. ಈ ಅಧ್ಯಾಯದಲ್ಲಿರುವ ಎಲ್ಲಾ ಸ್ವಾಮ್ಯಗಳು, ಪರಲೋಕಕ್ಕೆ ಸಂಬಂಧಪಟ್ಟವುಗಳಾಗಿವೆ).

1) ''ಪಾರುಪತ್ಯಗಾರ'' ಅಧಿಕಾರಿ ಸಭೆಗೆ ಭೇಟಿಕೊಟ್ಟು, ಹೆಚ್ಚಿನ ಹಣ ಕೊಡಿರಿ ಎಂಬ ಸಂದೇಶ ಕೊಟ್ಟ ಕೂಡಲೇ ನಾನು ಕಡಿಮೆ ಕೊಡುವ ತೀರ್ಮಾನ ಮಾಡಿರುತ್ತೇನೆ. ಈ ಕಥೆ ಪಾರುಪತ್ಯವನ್ನು ಕುರಿತು ನಮಗೆ ಬೋಧಿಸುವುದೇನು? (ಈ ಕಥೆ ನಿರ್ದಿಷ್ಟವಾಗಿ ಹಣವನ್ನು ಕುರಿತು ಮಾತಾಡಿದರೂ, ಇದು ಹಣವನ್ನು ಮಾತ್ರವಲ್ಲ, ದೈವದತ್ತವಾಗಿ ಬಂದ ಪ್ರತಿಭೆಯನ್ನು ಸಂಕೇತಿಸುತ್ತಿದೆ ಎಂದು ನನಗನ್ನಿಸುತ್ತಿದೆ. ನೀವು ಮಾಡುವ ಕೆಲಸಕ್ಕೆ ''ಹೆಚ್ಚಿನ'' ಹಣ ಹಾಗೂ ಕಾಲವನ್ನು ಕೊಡಿಸಿರಿ. ಎಂಬ ಸಂದೇಶ ಇಲ್ಲಿರುವಂತಿದೆ (ಮತ್ತಾಯ 25:16) ಇಲ್ಲಿನ ಮಹತ್ವದ ವಿಷಯ, ಆರಂಭದಲ್ಲಿ ನಿಮಗೆ ಎಷ್ಟು ಕೊಡಲಾಯಿತು ಎಂಬುದಲ್ಲ, ಆದರೆ ನೀವು ನಿಮಗೆ ಕೊಡಲ್ಪಟ್ಟ ತಲಾಂತಿನಿಂದ ಏನು ಸಾಧಿಸುತ್ತೀರಿ ಎಂಬುದು ಬಹಳ ಮುಖ್ಯ. ನೀವು ಪ್ರಾಮಾಣಿಕರಾಗಿ ನಡೆದುಕೊಂಡರೆ, ನಿಮಗೆ ಹೆಚ್ಚಿನ ಪ್ರತಿಫಲವುಂಟು. ಆದ್ದರಿಂದ ಪಾರುಪತ್ಯೆ ಎಂದರೆ, ಹೆಚ್ಚಾಗಿ ಹೊಂದಿರುವಿಕೆ ಎಂದಾಗುತ್ತದೆ).

## II. ಬಡವರ ಕುರಿತು:

ಅ) ಮತ್ತಾಯ 25:31-40 ನ್ನು ಓದಿಕೊಳ್ಳಿ. ಆ ಒಂದು ತಲಾಂತಿನ ಮನುಷ್ಯ, ಕೈಯಲ್ಲಿ ಒಂದು ಕಾಸಿಲ್ಲದೇ, ಯಜಮಾನನಿಂದ ಹೊರಗೆ ನೂಕಲ್ಪಡುತ್ತಾನಲ್ಲ, ಅವನು, ಯೇಸುಸ್ವಾಮಿ ಈ ವಾಕ್ಯದಲ್ಲಿ ''ನನ್ನ ಸಹೋದರರಲ್ಲಿ ಕೇವಲ ಅಲ್ಪನಾದವನೊಬ್ಬ'' ಎಂದು ಸೂಚಿಸುವ ಅಲ್ಪನ ಸ್ಥಾನಕ್ಕೆ ಅರ್ಹನಾಗುತ್ತಾನೆಯೇ?

1) ಈಗ ಆ ಹನ್ನೊಂದು ತಲಾಂತಿರುವ ಮನುಷ್ಯ ನೀವೇ ಎಂದು ಊಹಿಸಿಕೊಳ್ಳಿ. (ಆ ಸೋಮಾರಿಯು ಮತ್ತು ಕೆಟ್ಟವನೂ ಆದ ಮನುಷ್ಯನಿಂದ ಒಂದು ತಲಾಂತನ್ನು ತೆಗೆದು ಯಜಮಾನ ನಿಮಗೆ ಕೊಟ್ಟುಬಿಟ್ಟಿದ್ದಾನೆ).

i) ಹೀಗೆ ಮಾಡುವಾಗ, ಯಜಮಾನನ ತೀರ್ಮಾನವನ್ನು ತಿರಸ್ಕರಿಸುವಂತಾಗುವುದಿಲ್ಲವೇ?

ii) ಈ ಕಥೆ ಹಣವನ್ನು ಕುರಿತು ಮಾತನಾಡದಿರುವುದರಿಂದ ಇಲ್ಲಿ ಏನೋ ವ್ಯತ್ಯಾಸವಾಗಿದೆ ಎಂದು ನಿಗನ್ನಿಸುತ್ತದೆಯೇ? ಹಸಿದವನಿಗೆ ಆಹಾರ, ಬಾಯಾರಿದವನಿಗೆ ನೀರು, ಅಪರಿಚಿತನಿಗೆ ಆಹ್ವಾನ, ಬೆತ್ತಲೆಯಿರುವವನಿಗೆ

ಹೊಸಬಟ್ಟೆ, ಎಲ್ಲಾ ಸರಿ, ಆದರೆ ಯಾರಿಗೂ ಹಣ ಕೊಡುವುದಿಲ್ಲವೇಕೆ? (ನಾವು ಹಿಂದೆ ಓದಿದ ಕಥೆ ನಿರ್ದಿಷ್ಟವಾಗಿ ಹಣವನ್ನು ಕುರಿತೇ ಮಾತಾಡಿದೆ. ಆದರೆ ಈ ಕಥೆ ಹಣವನ್ನು ಕುರಿತು ಮಾತಾಡುವುದೇ ಇಲ್ಲ. ಯಜಮಾನ ಆ ಒಂದು ತಲಾಂತಿನ ಮನುಷ್ಯನಲ್ಲಿದ್ದ ಹಣವನ್ನು ಕಸಿದುಕೊಂಡ ಮೇಲೆ, ನಾವು ಅವನಿಗೆ ಹಣ ಕೊಟ್ಟರೆ ಅದು ನಿಜಕ್ಕೂ ಸಮಸ್ಯೆ, ಆದರೆ ಅವನಿಗೆ ಇರುವ ಕೊರತೆಯನ್ನು ಹೊಗಲಾಡಿಸುವುದು ಅರ್ಥಪೂರ್ಣ).

2) ಮೊದಲನೇಯ ಸ್ವಾಮ್ಯದಲ್ಲಿ ಯೇಸುಸ್ವಾಮಿ ಹಣವನ್ನು ಕುರಿತು ಮಾತಾಡಿದರೂ, ಅದು ಸಾಂಕೇತಿಕವಾಗಿ ಬಂದಿದೆಯೇ ಹೊರತು ಹಣದ ವಿಷಯಕ್ಕೆ ಅಷ್ಟೇನೂ ಮಹತ್ವವಿಲ್ಲ, ಅಲ್ಲವೇ? (ನೀವು ಮತ್ತಾಯ 13:12ನ್ನು ಓದಿಕೊಂಡರೆ, ಅಲ್ಲಿಯೂ ಸಹ ''ಇದ್ದವನಿಗೆ ಕೊಡಲ್ಪಡುವದು, ಅವನಿಗೆ ಮತ್ತೂ ಹೆಚ್ಚಾಗುವದೂ; ಇಲ್ಲದವನ ಕಡೆಯಿಂದ ಇದ್ದದ್ದೂ ತೆಗೆಯಲ್ಪಡುವದು'' ಎಂಬುದನ್ನು ಓದಿಕೊಂಡಾಗ ಈ ಹೇಳಿಗೆ ಸ್ಪಷ್ಟವಾಗಿ ಆಧ್ಯಾತ್ಮಿಕಕ್ಕೆ ಸಂಬಂಧಿಸಲ್ಪಟ್ಟಿದೆ ಎಂದು ನಮಗೆ ಗೊತ್ತಾಗುತ್ತದೆ).

3) ಹನ್ನೊಂದು ತಲಾಂತು ಇರುವ ಮನುಷ್ಯ, ತಲಾಂತೇ ಇಲ್ಲದ ಮನುಷ್ಯನಿಗೆ ಸಹಾಯ ಮಾಡಿದರೆ, ಆತ ತನ್ನ ಬಂಡವಾಳವನ್ನು ಮತ್ತೇ ಹೂಡುತ್ತಿದ್ದಾನೆ ಎನಿಸುತ್ತದೆಯೇ? (ತಲಾಂತುಗಳು ಹೇಗೆ ಹೂಡಲ್ಪಡುತ್ತವೆಯೆಂದು ನಮಗೆ ಹೇಳಲಾಗಿಲ್ಲ. ಇದಕ್ಕೆ ಆಧ್ಯಾತ್ಮದ ಬಣ್ಣ ಕೊಡುವುದಾದರೆ, ತಲಾಂತುಗಳು ದೇವರ ರಾಜ್ಯದ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಹೂಡಲಾಗಿದೆ ಎಂದುಕೊಳ್ಳಬಹುದು).

ಆ) ಯೇಸುಸ್ವಾಮಿ ನಮಗೆ ಇಲ್ಲಿ ಏನು ಭೋಧಿಸುತ್ತಿದ್ದಾರೆ ಎಂಬುದನ್ನು ಕಲಿತುಕೊಳ್ಳುವ ಸಲುವಾಗಿ ನಾನು ಅನೇಕ ಪ್ರಶ್ನೆಗಳನ್ನು ನಿಮಗೆ ಕೇಳಿದ್ದೇನೆ. ಈ ಎರಡು ಸ್ವಾಮ್ಯಗಳಲ್ಲಿ ನಾವು ಕಲಿತುಕೊಳ್ಳಬಹುದಾದ ಪಾಠಗಳೇನು? (ಮೊದಲನೆಯದಾಗಿ, ನಾವು ದೇವರಿಗಾಗಿ ಮಾಡಬೇಕಾದ ಕೆಲಸದಲ್ಲಿ ಪ್ರಾಮಾಣಿಕತೆ ಇರಬೇಕು. ಎರಡನೇಯದಾಗಿ, ನಾವು ಮಾಡುವ ಕೆಲಸದಿಂದ ಕಷ್ಟ ಸಂಕಷ್ಟಗಳಲ್ಲಿ ಬಳಲುತ್ತಿರುವವರಿಗೆ ಸ್ವಲ್ಪವಾದರೂ ಸಹಾಯವಾಗಬೇಕು).

## III. ತಲಾಂತುಗಳ ಪ್ರಕೃತಿ.

ಅ) ಯೇಸುಸ್ವಾಮಿ ಹೇಳಿದ ಸ್ವಾಮ್ಯಗಳು ನಮ್ಮಲ್ಲಿರುವ ಹಣ ಹಾಗೂ ಸಾಮಗ್ರಿಗಳನ್ನು (ಇವುಗಳ ವಿಷಯದಲ್ಲಿ ಪ್ರಾಮಾಣೀಕತೆಯನ್ನು)

ಕುರಿತದ್ದಾಗಿದೆ ಎಂಬುದನ್ನು ಕಂಡುಕೊಂಡೆವು) ಈ ತಲಾಂತಿನಲ್ಲಿ ನಮ್ಮ ದೈವದತ್ತ ಸಾಮರ್ಥ್ಯಗಳೂ ಸೇರಿಕೊಳ್ಳುತ್ತವೆಯೇ? (ಮತ್ತೆ ಮತ್ತಾಯ 25:15 ನ್ನು ಓದಿಕೊಳ್ಳಿರಿ. ''ಅವನವನ ಸಾಮರ್ಥ್ಯದ ಪ್ರಕಾರ'' ಎಂಬ ಹೇಳಿಕೆ ದೈವದತ್ತವಾದ ಸಾಮರ್ಥ್ಯಗಳನ್ನು ಕುರಿತದ್ದಾಗಿದೆ. ಯಜಮಾನನಿಂದ ಪಡೆದುಕೊಂಡ ಹಣದ ಕೀಲಿಕೈ ದೈವದತ್ತ ಸಾಮರ್ಥ್ಯ).

ಆ) ಮತ್ತಾಯ 25:45-51 ನ್ನು ಓದಿಕೊಳ್ಳಿ. ಇಲ್ಲಿ ಮತ್ತೊಬ್ಬ ಪ್ರಯಾಣಕ್ಕೆ ಹೋಗಿದ್ದ ಯಜಮಾನನ ಕಥೆಯಿದೆ. ಯಜಮಾನ ಬಂದಾಗ ಆಳು ಯಾವ ವಿಷಯದಲ್ಲಿ ಅವನಿಗೆ ಲೆಕ್ಕ ಒಪ್ಪಿಸಬೇಕಾಗಿತ್ತು. (ಜವಾಬ್ದಾರಿ ಮತ್ತು ಕಾಲ ''ಯಜಮಾನನು (ಬರುವುದಕ್ಕೆ) ತಡಮಾಡುತ್ತಾನೆ'' ಎಂದುಮನಸ್ಸಿನಲ್ಲಿ ಅಂದುಕೊಳ್ಳುವ ಆಳು ಅವನ ಆಸ್ತಿಯನ್ನು ದುರುಪಯೋಗ ಪಡಿಸಿಕೊಳ್ಳುತ್ತಾನೆ. ಮತ್ತು ಸಮಯವನ್ನು ಹಾಳು ಮಾಡುತ್ತಾನೆ).

1) ಕಾಲವು ತಲಾಂತು ಎಂದು ತಿಳಿದು ನಾವು ಅದರ ವಿಷಯದಲ್ಲೂ ಪಾರುಪತ್ಯಗಾರರಾಗಿಬೇಕೆ? (ಹೌದು, ದೇವರು ಮನುಷ್ಯ ನಿದ್ದೆ ಮಾಡುವ ರೀತಿಯಲ್ಲಿ ಸೃಷ್ಟಿ ಮಾಡಿರುವದು, ಕೆಲಸ ಹಾಗೂ ವಿಶ್ರಾಂತಿಯ ನಡುವೆ ಸಮತೋಲನ ಕಾಯ್ದುಕೊಳ್ಳಲಿಕ್ಕೆ ಎಂಬುದನ್ನು ಸುಲಭವಾಗಿ ಮನಗಾಣಬಹುದಾಗಿದೆ).

i) ಇತರರ ಆಸಕ್ತಿಗಳಿಗೆ ಹೋಲಿಸಿದರೆ, ನಿಮ್ಮ ಆಸಕ್ತಿಗಳನ್ನು ಪೂರೈಸಿಕೊಳ್ಳಲು ಶೇಕಡ ಎಷ್ಟು ಸಮಯ ವಿನಿಯೋಗವಾಗಿದೆ?

ii) ಶೇಕಡಾ ಎಷ್ಟು ಸಮಯವನ್ನು ನೀವು ಹಾಳುಮಾಡುತ್ತೀರಿ. ಮತ್ತು ಬೇರೆಯವರಿಗೆ ಸಹಾಯ ಮಾಡಬಹುದಾಗಿದ್ದ ಸಮಯವನ್ನು ಹಾಳುಗೆಡುಹುತ್ತೀರಿ).

iii) ಈ ಸ್ವಾಮ್ಯದಲ್ಲಿ ಬರುವ ಆಳು ತನ್ನ ಸುಪರ್ದಿನಲ್ಲಿರುವವರನ್ನು ದುರುಪಯೋಗಪಡಿಸಿಕೊಳ್ಳುವ ಮತ್ತು ಸಮಯ ಹಾಳುಮಾಡುವುದರ ಅಂತ್ಯ ಫಲಿತಾಂಶವೇನು? (ಏನೂ ಪ್ರಯೋಜನವಿಲ್ಲ, ಅಲ್ಲಿ ಗೋಳಾಟವೂ ಕಟಕಟನೆ ಹಲ್ಲು ಕಡಿಯೋಣವೂ ಇರುವುದು).

ಇ) ನನ್ನ ಸ್ನೇಹಿತರೇ, ಯೇಸುಸ್ವಾಮಿಯ ಪ್ರಾಮಾಣಿಕ ಹಿಂಬಾಲಕರು ಅಭಿವೃದ್ಧಿಯಾಗುವುದನ್ನು ಮತ್ತು ಸೋಮಾರಿಯೂ ಮತ್ತು ಕೆಟ್ಟವನಾದ ಆಳು ಗೋಳಾಡುವುದು ಮತ್ತು ಕಟಕಟನೆ ಹಲ್ಲು ಕಡಿಯುವುದನ್ನು ಕಂಡೆವು. ಇಲ್ಲಿ ಹೇಳಲ್ಪಡುವ ಕಟಕಟನೆ ಹಲ್ಲು ಕಡಿಯುವುದನ್ನು ನಾನು, ಅವರು ಹಿಂದೆ ತೆಗೆದುಕೊಂಡ ತೀರ್ಮಾನಗಳ ವಿಷಯದಲ್ಲಿ ಪಡುತ್ತಿರುವ ವಿಷಾದ ಎಂದು ವಿಶ್ಲೇಷಿಸುತ್ತಿದ್ದೇನೆ. ನೀವೂ ಸಹ ಭವಿಷ್ಯದ ವಿಷಯದಲ್ಲಿ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ನೀವು ಯೇಸುಸ್ವಾಮಿಗೆ ಪ್ರಾಮಾಣಿಕನೂ, ಸಾತ್ವಿಕನೂ ಆದ ಆಳಾಗಿರಲು ತೀರ್ಮಾನ ತೆಗೆದುಕೊಳ್ಳುವಿರಾ?

## IV. ಮುಂದಿನ ವಾರ: ಸಮುದಾಯ:-